
## ಬುರುಡೆ ಜಲತಲದಲ್ಲಿ ಬುರುಡೆ ತಿರುಗಿಸಿದ್ದು!



ಚಾರಣದ ಹೆಸರಿನಲ್ಲಿ ಅದೆಷ್ಟೂ ಬಾರಿ ಹಿಮ ನಡಿಗೆಗೆ ಹೊರಳುವ, ಮರಳುಗಾಡಿನಲ್ಲಿ ಅಲೆದಾಡುವ, ಪರ್ವತದೆಡೆ ಪಯಣ ಬೆಳೆಸುವ, ಕಡಲಂಚಿನ ಕಾವ್ಯವಾಗುವ ನನಗೆ ಸದಾ ಪ್ರಿಯವಾಗುವುದು ಕಣ್ತುಂಬ ಹಸಿರ ತುಂಬಿಕೊಂಡು ಕಾಡಿನೊಳಗೆ ನನ್ನನ್ನೇ ನಾನು ಕಳೆದುಕೊಳ್ಳಬಲ್ಲ ಅರಣ್ಯ ಚಾರಣ.

ರೆಡ್ವುಡ್, ಪೈನ್ವುಡ್ ಮರಗಳಿರುವ ಕಾಡಿನೊಳಗಿನ ನಡೆ ಹೊಸತನವನ್ನು ನೀಡಿದರೂ, ನಮ್ಮ ಪಶ್ಚಿಮಘಟ್ಟದ ದಟ್ಟ ಮರಗಳ ನಡುವೆ ನುಸುಳಿಕೊಂಡು, ನೆರಳು ಬೆಳಕಿನಾಟವಾಡಿಸುವ ಹಾದಿಯಲ್ಲಿ ಸಾಗುವಾಗ, ಉಂಬಳಗಳ ದಾಳಿಗೆ ಉರಗಗಳ ದರ್ಶನಕ್ಕೆ ಅಂಜಬೇಕಾಗಿ ಬಂದರೂ ಪಕ್ಷಿಗಳನ್ನು ಕ್ಯಾಮೆರಾದಲ್ಲಿ ಕಲೆಹಾಕಿಕೊಳ್ಳುತ್ತ, ಬಗೆಬಗೆಯ ಕಾಡು ಮರಗಳ ಬೀಜವನ್ನು ನನ್ನ ಸಂಗ್ರಹ ಬುಟ್ಟಿಗೆ ಏರಿಸಿಕೊಳ್ಳುತ್ತ, ಅಲ್ಲಲ್ಲಿ ಅಪರೂಪದ ಮರವನ್ನೊಮ್ಮೆ ತಬ್ಬಿಕೊಂಡು, ಸಾಧ್ಯವಾದಲ್ಲಿ ಏರಿ ಇಳಿಯುವ ಅವಕಾಶ ದೊರಕಿಸಿಕೊಡುವ ಅರಣ್ಯ ಚಾರಣ ನನ್ನ ಮಟ್ಟಿಗೆ ಆಗಾಗ ಸವಿಯುವ ತಾಲಿ ಊಟದ ಹಾಗೆ!

ಮತ್ತೆಮತ್ತೆ ಹೋಗಬೇಕೆನ್ನಿಸುವ ಇಂತಹ ಒಂದು ತಾಣ ಅಘನಾಶಿನಿ ನದಿಗುಂಟದಲ್ಲಿ ಕಾಣುವ ಬುರುಡೆ ಜಲಪಾತದ ಚಾರಣ; ಉತ್ತರ ಕನ್ನಡದ ಸಿದ್ದಾಪುರ–ಕುಮಟಾ ಮಾರ್ಗದಲ್ಲಿ ಸಿಗುವ ಇಳಿಮನೆ ಜಲಪಾತ. ಈ ಜಾಗ ಥ್ರಿಲ್ಲಿಂಗ್ ಕ್ಲೈಮಾಕ್ಸ್ ಸಿನಿಮಾ ನೋಡಿದ ಹಾಗೆ! ಅರಣ್ಯ ಚಾರಣದ ಕೊನೆಯ ಘಟ್ಟ ಕಡಿದಾದ ಇಳಕಲು! ಎದೆ ಝುಲ್ಲೆನಿಸುವಂತದ್ದು. ಇಲ್ಲಿ ಸಾಮಾನ್ಯವಾಗಿ ಚಾರಣಿಗರು ಹಗಲಿನಲ್ಲಿ ಹೋದರೆ, ನಾನು, ನಮ್ಮ ತಂಡದೊಂದಿಗೆ ಚಳಿಗಾಲದ ವಾರಾಂತ್ಯದ ಒಂದು ಸಂಜೆ ಮತ್ತು ಮರು ಮುಂಜಾವು ಸೂರ್ಯೋದಯ ಪೂರ್ವದಲ್ಲೇ ಇನ್ನೊಮ್ಮೆ ಇಳಿದಿದ್ದೆವು! ಅಂತಹ ಚುಂಬಕ ಬುರುಡೆಯದು! ಆಗ ನಮ್ಮ ಬುರುಡೆಯ ಬಗ್ಗೆ ಮಾತನಾಡಿದ ಜನಕ್ಕೆ ತಲೆಕೆಡಿಸಿಕೊಳ್ಳದಿದ್ದರೂ, ಆ ಮನೋರಮಣೀಯ ಜಾಗದ ಜಾರುವ ಕಲ್ಲುಗಳ ಮಧ್ಯೆ ನಿಂತು ಸುಮಾರು 90 ಅಡಿಯಿಂದ ಧುಮ್ಮಿಕ್ಕುವ ಜಲಧಾರೆಯ ಇಬ್ಬಗೆಯ ನೋಟಕ್ಕಾಗಿ ಬುರುಡೆ ತಿರುಗಿಸಿದ್ದು ಮಾತ್ರ ಮರೆಯಲು ಸಾಧ್ಯವೇ ಇಲ್ಲ.

–ಸಹನಾ ಬಾಳ್ಕಲ್
ಸಹಾಯಕ ಆಯುಕ್ತರು, ಸ್ಥಳೀಯ ಸರಕು
ಮತ್ತು ಸೇವಾ ತೆರಿಗೆ ಕಚೇರಿ, ಬೆಂಗಳೂರು

ಸಂದರ್ಭದಲ್ಲಿ ಕಾಡ್ಗಿಚ್ಚು ನಿಸರ್ಗನಿರ್ಮಿತ ಅಲ್ಲ, ಮಾನವ ನಿರ್ಮಿತ) ಪಶ್ಚಿಮಘಟ್ಟದಲ್ಲಿ ಉಗಮವಾಗುವ ನದಿಗಳ ಸೂಕ್ಷ್ಮಪ್ರದೇಶದಲ್ಲಿ ಮಾನವ ಹಸ್ತಕ್ಷೇಪದ ಚಟುವಟಿಕೆಗಳು ಹೆಚ್ಚಾದಂತೆ ನದಿ ನೀರನ್ನೇ ಆಶ್ರಯಿಸಿದ ನಮ್ಮ ಭವಿಷ್ಯದ ಭದ್ರತೆ ಏನು? ಹೀಗೆ ಹಲವಾರು ವಿಷಯಗಳ ಚಿಂತನೆಗೆ ಚಾರಣ ಸಂದರ್ಭ ಅವಕಾಶ ಕಲ್ಪಿಸುತ್ತದೆ.

ಅಡವಿಯಂಚಿನ ಬುಡಕಟ್ಟು ಸಮುದಾಯದ ಮಕ್ಕಳು ಶಿಕ್ಷಣ ವಂಚಿತರಾಗಿರುತ್ತಾರೆ. ಅಂತಹ ಮಕ್ಕಳಿಗೆ, ಅಡವಿ, ಶಿಖರ, ವನ್ಯಜೀವಿಗಳ ಬಗ್ಗೆ ಸಾಕಷ್ಟು ತಿಳಿವಳಿಕೆ ಇರುತ್ತದೆ. ಅವರ ಶಿಕ್ಷಣಕ್ಕೆ ಪೂರಕವಾದ ನೆರವು ನೀಡಿದರೆ, ಅವರು ಕಲಿತು ಮುಂದೊಂದು ದಿನ ಅರಣ್ಯ ಇಲಾಖೆಯ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವಂತಾದರೆ ಅರಣ್ಯಸಂರಕ್ಷಣೆಗೆ ಸಹಾಯಕವಾಗಬಹುದು. ಬುಡಕಟ್ಟು ಸಮುದಾಯದವರಲ್ಲಿ ಅರಣ್ಯ ರಕ್ಷಣೆಯ ಬಗ್ಗೆ ಬಹಳಷ್ಟು ವಿಚಾರಗಳು ಇರುವುದರಿಂದ ಮತ್ತು ಅವರು ಪ್ರಾಯೋಗಿಕವಾಗಿ ತಮ್ಮ ವಿಚಾರಗಳನ್ನು ಅನುಸರಿಸಿಕೊಂಡು ಬಂದಿರುವ ಕಾರಣ, ಅವರ ವಿಚಾರಗಳನ್ನು ಅರಿತು ಪತ್ರಿಕಾ ಲೇಖನ, ಡಾಕ್ಯುಮೆಂಟರಿ ಚಿತ್ರಣ ಮಾಡುವ ಮೂಲಕ ಚಾರಣಿಗರು ಸಾಮಾಜಿಕ ಜಾಗೃತಿ ಮೂಡಿಸುವ ಕೆಲಸ ಮಾಡಬಹುದು.

ಚಾರಣಕ್ಕೆ ಹೋಗುವವರು ಅರಣ್ಯ ಇಲಾಖೆಯಿಂದ ಕಡ್ಡಾಯವಾಗಿ ಅನುಮತಿ ಪಡೆದಿರಬೇಕು. ಗುಂಪಿನಲ್ಲಿ ಒಬ್ಬರಾದರೂ ಅನುಭವಿ ಚಾರಣಿಗರು ಇರುವುದು ಅತ್ಯವಶ್ಯಕ. ಆಗಾಗ ಚಾರಣಕ್ಕೆ ಹೋಗುವ ಕೆಲವು ಗುಂಪುಗಳು, ಯುವ ಸಂಘಟನೆಗಳೂ ಇರುತ್ತವೆ. ಅಂಥ ಸಂಘಟನೆಗಳಲ್ಲಿ ಅನುಭವಿ ಚಾರಣಿಗರು ಇರುವುರಿಂದ ಚಾರಣಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿರುತ್ತಾರೆ. ಚಾರಣದಲ್ಲಿ ಉಂಟಾಗಬಹುದಾದ ತೊಂದರೆಗಳನ್ನು ಊಹಿಸಿ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿರುತ್ತಾರೆ. ಆಸಕ್ತ ಚಾರಣಿಗರು ಅಂಥ ಗುಂಪಿನೊಂದಿಗೆ ಸೇರಿಕೊಳ್ಳುವುದು ಹಿತಕರ.

### ಕೆಲವು ಮುನ್ನೆಚ್ಚರಿಕೆಗಳು

- ಚಾರಣಕ್ಕೆ ಹೋಗುವವರು, ಬೆನ್ನಿಗೆ ತೂಗಿಕೊಳ್ಳುವ ಚೀಲದಲ್ಲೇ ತಮ್ಮ ಸರಂಜಾಮುಗಳನ್ನು ತುಂಬಿಕೊಳ್ಳಬೇಕು. ಕೈಗಳು ಆದಷ್ಟು ಖಾಲಿ ಇದ್ದರೆ ಉತ್ತಮ. ನಡೆಯಲು, ಬೆಟ್ಟವೇರಲು ಸುಲಭವಾಗುತ್ತದೆ.
- ಹಿಮಾಲಯದಂಥ ಪ್ರದೇಶಗಳಿಗೆ ಚಾರಣ ಹೋಗುವವರಿಗೆ ಆರೋಗ್ಯದ ಸಮಸ್ಯೆಗಳು ಕಾಡುವ ಸಾಧ್ಯತೆ ಇರುತ್ತದೆ. ಅಂಥ ಪರಿಸರಕ್ಕೆ ಹೊಂದಿಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಿಕೊಂಡಿರಬೇಕು. ಉಣ್ಣೆಯ ನಿಲುವಂಗಿ, ಗ್ಲೌಸ್, ತುಂಬುಕಾಲಿನ ಪಾದರಕ್ಷೆ, ಚರ್ಮವನ್ನು ರಕ್ಷಿಸಲು ಅಗತ್ಯವಾದ ಎಣ್ಣೆ, ಅಥವಾ ಕ್ರೀಮ್, ಸ್ಲೀಪಿಂಗ್ ಬ್ಯಾಗ್ –

